ಶ್ರೀ ಬಿ. ಎಂ. ಪಾಟೀಲ್.—ಆ ವಿಚಾರ ನನ್ನಲ್ಲಿಲ್ಲ. ಡಿವಿಜನಲ್ ಆಫೀಸರು ಎನ್‌ಕ್ವೈರಿ ಮಾಡಿ ಅದನ್ನು ಡಿ.ಸಿ.ಗೆ ರವಾನೆ ಮಾಡಿದ್ದಾರೆ. ಅವರು ಸೂಕ್ತ ಕ್ರಮ ಕೈಗೊಳ್ಳುತ್ತಾರೆ. ಅವರು ಅದರ ಬಗ್ಗೆ ಈಗಾಗಲೇ ನೋಟೀಸುಗಳನ್ನು ಇಷ್ಯೂ ಮಾಡಿದ್ದಾರೆ. ಅದಕ್ಕೆ ಜವಾಬ್ ಬಂದ ಕೂಡಲೇ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಸರ್ಕಾರ ಈ ವಿಚಾರದಲ್ಲಿ ಪತ್ರ ಬರೆದು 6 ವರ್ಷಗಳಾಯಿತು, ಇನ್ನೂ ವಿಚಾರಣೆ ಮುಗಿದಿಲ್ಲ. ಇನ್ನು ಕ್ರಮ ಕೈಗೊಳ್ಳಬೇಕಾದರೆ ಇನ್ನೆಷ್ಟು ವರ್ಷಗಳು ಬೇಕು ?

ಶ್ರೀ ಬಿ. ಎಂ. ಪಾಟೀಲ್.—ಅವರಿಗೆ 1968ರಲ್ಲೇ ನೋಟೀಸನ್ನು ಇಷ್ಯೂ ಮಾಡಲಾಗಿದೆ. ಅದಕ್ಕೆ ಇಂತಿಷ್ಟು ಕಾಲಾವಕಾಶ ಕೊಡಬೇಕೆಂಬ ನಿಯಮವಿದೆ. ಅವರಿಂದ ಉತ್ತರ ಬಂದ ತಕ್ಷಣ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಮೈಸೂರು ದೇಶದ ಮುನಿಸಿಪಾಲಿಟಿಗಳಲ್ಲಿ ಸೇಕಡ 80ರಷ್ಟು ಮುನಿಸಿಪಾಲಿಟಿಗಳಲ್ಲಿ ಚೀಫ್ ಆಫೀಸರ್ ಪ್ರೆಸಿಡೆಂಟಾಗಿರುವುದರಿಂದ ಈ ತರಹ ಅಕ್ರಮಗಳನ್ನು ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ನಾವು ಎಷ್ಟು ಸರ್ಕಾರಕ್ಕೆ ತಿಳಿಸಿದರೂ ಕೂಡ ಯೋಚಿಸಲಾಗುತ್ತಿದೆ, ಅದಕ್ಕೆ ಕಾನೂನು ಪ್ರಕಾರ ನಡೆಯುತ್ತೇವೆಂದು ಹೇಳುತ್ತಾರೆ. ದೇಶದ ಸ್ವತ್ತನ್ನು ಮಾರಾಟಮಾಡುವುದಕ್ಕೆ ಅವರಿಗೆ ಹಕ್ಕುದಾರಿಕೆಯನ್ನು ಕೊಟ್ಟಿದ್ದೇ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಿದ್ದಾರೆ. ಅವರ ಅಭಿಪ್ರಾಯ ಸೂಕ್ತವಲ್ಲ. ಯಾವುದಾದರೂ ಒಂದು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಟ್ಟು ಕಾನೂನ್ ಪ್ರಕಾರ ಇಂತಹವರು ಮಾಡುತ್ತಾ ಇಲ್ಲವೆಂದು ಹೇಳಿದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

Sri M. M. JALISATGI.—If the sales are irregular, I want to know whether the Government has taken steps to cancel the sales ?

Sri B. M. PATIL.—It has come to the notice of the Government that the sales are irregular. So, an enquiry is being conducted. After the enquiry is over, Government will take appropriate action in the matter.

ಶ್ರೀ ಕೆ. ಎಚ್. ಪಾಟೀಲ್.—ನಿಯಮಗಳನ್ನು ಮೀರಿ ನಗರನಭೆಗಳಿಗೆ ಲುಕ್ಸಾನು ಮಾಡುವ ರೀತಿಯಲ್ಲಿ ಸೈಟುಗಳನ್ನು ವಿಲೇವಾರಿಮಾಡುವ ಅಧಿಕಾರಿಗಳ ಬಗ್ಗೆ ತಮ್ಮ ಗಮನಕ್ಕೆ ತಂದರೆ, ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಸ್ಪೆಸಿಫಿಕ್ಕಾಗಿ ಇಂಥಾವರು ಈ ರೀತಿಮಾಡಿದ್ದಾರೆ ಎಂದು ಸರ್ಕಾರದ ಗಮನಕ್ಕೆ ತಂದರೆ ಆಗ ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri B. B. SAYANAK.—May I know how many Municipal sites have been sold irregularly ?

Sri B. M. PATIL.—The exact number is not available here but some sites have been sold irregularly. Already an enquiry is being conducted.

Construction of a Bridge across the Shalmala River

624. **Sri F. S. PATIL** (Kalaghatgi).—

Will the Minister for Public Works be pleased to state :—

(*a*) whether it has come to their notice that the survey work for the construction of a bridge across Shalamala River, Banadura-Cholamatta Road in Kalaghatgi Taluk is being constructed since many years ;

(*b*) whether it has come to their notice that people of 30-40 villages of Kalaghatgi Taluk have to cover 25-30 extra miles to go to Dharwar, Hubli, Haliyal and Dandeli Taluks for want of this bridge ;

(*c*) whether the survey work about the construction of this bridge is completed and plans and estimates are ready ;

(*d*) whether the construction work of the bridge will be started this year alone ?

Sri BASAVARAJ MAGAVI (Deputy Minister for Public Works).—

(*a*) Survey work was started after August 1968.

(*b*) Yes, during rainy season only.

(*c*) Survey work is completed and plans and estimates are ready.

(*d*) This will be considered.

ಶ್ರೀ ಎಸ್. ಎಸ್. ಪಾಟೀಲ್.—1967ನೇ ಜುಲೈನಲ್ಲಿ ಈ ಸೇತುವೆ ಒಡೆದುಹೋದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಬಸವರಾಜ ಮಾಗಾವಿ.—ಅದರ ಬಗ್ಗೆ ನನ್ನಲ್ಲಿ ದಾಖಲೆಗಳು ಇಲ್ಲ. ಆದರೆ ಅಲ್ಲಿ ಈ ಸೇತುವೆ ಇನ್ನೂ ಆಗದೇ ಇರುವುದರಿಂದ ಅಲ್ಲಿನ ಜನರಿಗೆ ಬಹಳ ಅನಾನುಕೂಲವಾಗಿದೆ ಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಫ್. ಎಸ್. ಪಾಟೀಲ್.—ಇದರ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರಿಸ ಲಾಗಿದೆಯೆಂದು ಉತ್ತರದಲ್ಲಿ ಹೇಳಿದೆ. ಅಂದಮೇಲೆ ಈ ಕೆಲಸವನ್ನು ಪ್ರಾರಂಭಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಬಸವರಾಜ ಮಾಗಾವಿ.—ಹಣದ ಅಭಾವದಿಂದ ಈ ಕೆಲಸವನ್ನು ಪ್ರಾರಂಭ ಮಾಡುವು ದಕ್ಕಾಗಲಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಸೇತುವೆಯ ನಿರ್ಮಾಣದ ಕೆಲಸವನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸುವುದಕ್ಕಾಗುತ್ತದೆಯೇ ?

ಶ್ರೀ ಬಸವರಾಜ ಮಾಗಾವಿ.—ಈ ವರ್ಷದ ಬಡ್ಜೆಟ್ಟಿನಲ್ಲಿ ಅದನ್ನು ಇನ್‌ಕ್ಲೂಡ್ ಮಾಡ ಬೇಕೆಂದು ಪ್ಲಾನ್ ಅಂಡ್ ಎಸ್ಟಿಮೇಟ್ ಆಗಿದೆ. ಈಗ ಇದಕ್ಕೆ 1,78,900 ರೂಪಾಯಿಗಳ ಅಂದಾಜು ಆಗಿದೆ. ಸ್ವಲ್ಪ ಹಣದ ಅಭಾವದಿಂದ ಈಗ ಮಾಡಲಿಲ್ಲ. ಮುಂದಿನ ವರ್ಷ ಅದನ್ನು ತಗೆದುಕೊಳ್ಳಲಾಗುತ್ತದೆ.

Masonry and Earthen Dam of Suvarnavathy Project

653. Sri S. PUTTASWAMY (Chamarajanagar).—

Will the Chief Minister be pleased to state :—

(*a*) the length of the Masonry Dam and Earthen Bund of Suvarnavathy Project, Chamarajanagar Taluk ;

(*b*) the actual quantum of earthwork incorporated in the estimate ;

(*c*) the number of bulldozers and scrapers employed in the Project ;